ಬಾಲ್ಕನಿಯಲ್ಲಿ ಕನ್ನಡಿ ಹಿಡಿದು ಕುಳಿತುಕೊಳ್ಳುತ್ತಿದ್ದಳು ಸುಮತಿ. ಮುರಿದ ಬಾಚಣಿಗೆಯಿಂದ ಭಾರಿ ಎಚ್ಚರಿಕೆಯಿಂದ ತನ್ನ ತಲೆ ಕೂದಲನ್ನು ಬಾಚಿಕೊಳ್ಳುತ್ತ ಇರುತ್ತಿದ್ದಳು.

ಅದೇ ಹೊತ್ತಿಗೆ ಸ್ನಾನ ಮಾಡ್ಕೊಂಡು ರಂಜಾವತಿ ದೀದಿ ಕೈ ಮಗ್ಗದ ಸೀರೆ ಉಟ್ಟುಕೊಂಡು ಕೂದಲು ಮೇಲೆತ್ತಿ ಗಂಟ್ಹಾಕಿಕೊಂಡು ಬಚ್ಚಲು ಮನೆಯಿಂದ ಹೊರಬರುತ್ತಿದ್ದಳು. ಗಂಡನಿಗೆ ಸಂಜೆ ಹೊತ್ತಿನ ತಿಂಡಿ ತಯಾರಿಸ್ತಾ ಒಂದೊಂದು ದಿನ ಸುಮತೀನಾ ನೋಡ್ತಾ ಹೇಳುತ್ತಿದ್ದಳು, “ಏಯ್ ಸುಮತಿ ನಿಂಗೂ ವಯಸ್ಸಾಯ್ತು, ಈಗ ನೀನು ಈ ಸಣ್ಣ ಪುಟ್ಟ ಮನೆ ಕೆಲಸ ಬಿಟ್ಟು ಯಾರದಾದ್ರೂ ಮನೆಯಲ್ಲಿ ದಿನ ಪೂರ್ತಿ ಇರೋ ಕೆಲಸ ಹುಡ್ಕೋ”.

ನಾಚಿಕೆ ಅನ್ನೋದು ಸುಮತಿಗೆ ಐವತ್ತರ ದಶಕದ ಪ್ರವಾಹದೊಂದಿಗೇ ಕೊಚ್ಚಿಕೊಂಡು ಹೋಗಿತ್ತು, ಅವಳ ಆರು ಮಕ್ಕಳ ಅಪ್ಪ ತಂದುಕೊಟ್ಟಿದ್ದ ಕೊನೆಯ ಸೀರೆಯೊಂದಿಗೆ. ಆದರೂ, ರಂಜಾವತಿ ದೀದಿಯ ಕಣ್ಣು ನೋಡಿದಾಗ ಒಂಚೂರು ನಾಚಿಕೆ ಎನಿಸುತ್ತಿತ್ತು. ಆಗ ಸುಮತಿ ತನ್ನ ಸೀರೆಯನ್ನು ಒಣಗಿ ಹೋಗಿದ್ದ ಎದೆಯ ಮೇಲೆ ರಂಜಾವತಿ ಕೊಟ್ಟಿದ್ದ ಹಳೆಯ ರವಿಕೆ ಮುಚ್ಚುವಂತೆ ಎಳೆದುಕೊಳ್ಳುತ್ತಿದ್ದಳು.

ತಲೆ ತಗ್ಗಿಸಿಕೊಂಡು ಚಂದ್ರಾಲೇನಿನ ಕೊಳೆಗೇರಿಯೊಳಕ್ಕೆ ನುಗ್ಗುತ್ತಿದ್ದಳು ಸುಮತಿ. ಆ ಕೊಳೆಗೇರಿಯ ಮಸಿ ಹಿಡಿದ ಟಿನ್ ಶೆಡ್ಡಿನ ಎದುರು ದಿನದ ಕೆಲಸ ಮುಗಿಸಿ ಬಂದ ಹೆಣ್ಣುಗಳು ರಾತ್ರಿಯ ಮೋಹಿನಿಯರಾಗಿ ಸೆಟೆದು ಕುಳಿತಿರುತ್ತಿದ್ದರು. ಮನೆಗೆ ಬಂದು ಹೌರಾ ಸಂತೇಲಿ ತಂದಿದ್ದ ಬಣ್ಣ ಬಣ್ಣದ, ಮಾಸಿದ ಸೀರೆ ಉಟ್ಟುಕೊಳ್ಳುವಾಗ ಅವಳ ಆರು ಮಕ್ಕಳ ತಂದೆಯ ನೆನಪು ಬರುತ್ತಿತ್ತು. ಹೊಲಗದ್ದೆ ಕೆಲಸ ಮುಗಿಸಿ ಬಂದ ಅವನಿಗೆ ಸಂಜೆ ವೇಳೆಯ ತಿಂಡಿ ತಯಾರಿ ಮಾಡಿಡುತ್ತಿದ್ದಳು. ಆದರೆ, ರಂಜಾವತಿ ದೀದಿಯ ತರಹ ಬಗೆಬಗೆಯಾಗಿ ಅಲ್ಲ, ಯೋಚಿಸ್ತಾ ಯೋಚಿಸ್ತಾ ಅವಳ ನೆನಪುಗಳು ಅವಳ ಅಂತರಂಗದ ಪುಟಗಳೊಳಗೆ ಹುದುಗುತ್ತಿದ್ದವು. ಬಾಗಿಲು ತೆಗೆದು ಮನೆ ಎದುರು ಬಂದು ಕುಳಿತ ಸುಮತಿಗೆ ಬರೀ ಸೀಮೆಯೆಣ್ಣೆ ಬುಡ್ಡಿ ಬೆಳಕು ಮಾತ್ರ ನಿಜವಾಗಿರುತ್ತಿತ್ತು.

ಕೊನೆಗೆ, ಅವಳು ಮುಚ್ಚಿಟ್ಟಿದ್ದ ಮತ್ತೊಂದು ಮುಖವೂ ಆ ರಾತ್ರಿ ಚಂದ್ರಾ ಲೇನಿನ ಕೊಳೆಗೇರಿಯೊಳಗೆ ಅನಾವರಣಗೊಂಡಿತು. ಆ ದಿನ ರಂಜಾವತಿ ದೀದಿ, ದಾದಾಬಾಬು ಇಬ್ಬರೂ ರಾತ್ರಿ ಸಿನಿಮಾ ನೋಡ್ಕೊಂಡು ಹತ್ತಿರದ ದಾರಿ ಅಂತ ಚಂದ್ರಾ ಲೇನಿನ ಸಂದಿಯಿಂದ ಬರುತ್ತಿದ್ದರು. ಸುಮತಿ ಬಗ್ಗೆ ರಂಜಾವತಿಗೆ ಎಲ್ಲ ಗೊತ್ತಿದ್ದರೂ, ಆ ದಿನ ಕಣ್ಣಾರೆ ನೋಡಿದ ಮೇಲೆ ಅವಳ ಬಗ್ಗೆ ಅಸಹ್ಯ ಮತ್ತಷ್ಟು ತುಂಬಿಕೊಂಡಿತು.

ಮಾರನೇ ದಿನ ಮಧ್ಯಾಹ್ನ ಪಾತ್ರೆ ತೊಳೆಯೋಕೆ ಬಂದ ಸುಮತಿಯ ಕಿವಿಗೆ, “ನಿನಗೆ ನಾಚಿಕೆಯಾಗೋದಿಲ್ಲವೇ? ಒಂಚೂರೂ ಮಾನ ಮಾರ್ಯಾದೆ ಇಲ್ವಾ?” ಎನ್ನುವ ಮಾತುಗಳು ಕಬ್ಬಿಣದಂತೆ ಬಡಿದವು.

“ಏನ್ ಮಾಡ್ಲಿ ದೀದಿ, ಹೊಟ್ಟೆ ಕೇಳಲ್ಲ.”

“ಹಸಿವು? ಗೊತ್ತಾ ಸುಮತಿ, ನಾನಾಗಿದ್ದರೆ ನೇಣು ಹಾಕೊಂಡು ಸಾಯ್ತಾಯಿದ್ದೆ, ಯಾವತ್ತೂ ಅಂತ ಕೆಲಸ ಮಾಡ್ತಾಯಿರಲಿಲ್ಲ.”

ಸುಮತಿಯ ಎದೆಯೊಳಗೆ ಅಸಹಾಯಕತೆಯ ನೋವು ಕಾಣಿಸಿಕೊಂಡಿತು. ಸುಮತಿ ಅಂದುಕೊಂಡಳು, ಒಂದ್ಸಲ ದೀದಿಯ ಕಾಲುಗಳೆರಡನ್ನು ಹಿಡ್ಕೊಂಡು ಹೇಳಬೇಕು ‘ದೀದಿ, ದೀದಿ ನಿಲ್ಲು, ಹೊಟ್ಟೆಯ ಬೆಂಕಿ ಏನೂ ಅಂತ ನಿಂಗೊತ್ತಿಲ್ಲ’ ಅಂತ.

ಆದರೆ, ಬಾಯಿ ಮುಚ್ಚಿಕೊಂಡು ಸುಮ್ಮನಿದ್ದಳು, ಒಂದು ಮಾತೂ ಆಡಲಿಲ್ಲ. ರಂಜಾವತಿ ದೀದಿಗೆ ಹೊಟ್ಟೆ ಹಸಿವಿಲ್ಲ, ಹೊಟ್ಟೆ ಹಸಿವಿದ್ರೂ ಸುಮತಿ ತರಹ ನಾಚಿಕೆಯಿಲ್ಲದೆ ಎಲ್ಲವನ್ನೂ ಭಕ್ಷಿಸುವ ಹಸಿವಲ್ಲ. ದಿನಾ ಬೆಳಗ್ಗೆ ಎದ್ದು ಜನರ ಮನೆಯಿಂದ ಉಳಿದುಬಳಿದ ತಂಗಳನ್ನ, ಹಳಸಿದನ್ನ ತಂದು ನೆಲದ ಮೇಲೆ ಕೂತು ತಿನ್ನುವುದನ್ನು ಈ ದೀದಿಗೆ ಕಲ್ಪಿಸಿಕೊಳ್ಳೋಕೂ ಸಾಧ್ಯವಿಲ್ಲ.

ಆ ದಿನ ಸುಮತಿ ನೋಡ್ತಾಳೆ, ತೊಳೆಯೋಕೆ ಒಂದೂ ಪಾತ್ರೆನೇ ಇಲ್ಲ. ಅಷ್ಟೇ ಅಲ್ಲ, ಸುಂದರವಾದ ರೂಮೊಳಗೆ, ಕೆಂಪು ಟೇಬಲ್ ಮೇಲೆ ಗಂಡನಿಗೆ ಊಟ ಮುಚ್ಚಿಟ್ಟು ರಂಜಾವತಿ ದೀದಿ ಕೂತಿರುವುದೂ ಕಾಣಿಸಿತು. ಕೆಂಪಂಚಿನ ಸೀರೆ ಸೆರಗಿನ ಮೇಲೆ ಜಲಪಾತದಂತೆ ಹರಡಿಕೊಂಡಿದ್ದ ಕೂದಲು. ಸುಮತಿಗೆ